DOC-533
T-P-2

(1)

Reg no KRNN 12 ಶೀ. For Influential Publicity 20-9-76

ಕೃಷ್ಣ ಮಹೋತ್ಸವ ನೆರವೇರಿತು ವಜ್ರಮಹೋತ್ಸವ ನೀರವೇಂಕಲೆರುವ ಕಾಲ

# ಸತ್ಯವಾದಿ

SATYAVADI

60 th Diamond Jubilee Year
೬೦ ನೇ ವಜ್ರಮಹೋತ್ಸವ ವರ್ಷ

★ Satyavadi Daily . Mysore 4 ★

ಸಂಸ್ಥಾಪಕರು : ಅರಮನೆ ಏರಸ್ಟೇಡಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರೈಕನಿರತ ಎಂ. ವೆಂಕಟಕೃಷ್ಣರಾವ್ (5 ಪೈಸೆ

### ಪ್ರಧಾನರಿಗೆ ರಾಷ್ಟ್ರ ಚಿರರುಣಿ ಆಗಿರಬೇಕು

ಬೆಂಗಳೂರು — ಅಖಿಲ ಭಾರತ ಅಕಾಶವಾಣಿ ಸುದ್ದಿಗಾರರಿಗೆ ಭೇಟಿ ನೀಡಿದ ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳವರು ಮಾತನಾಡುತ್ತಾ, ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ರಾಷ್ಟ್ರವು ಚಿರರುಣಿ ಆಗಿರಬೇಕೆಂದು ತಿಳಿಸಿದರು. ಇತ್ತೀಚೆಗೆ ಆಂತರಿಕ ಕಾರ್ಯಕ್ರಮಗಳ ಜಾರಿಯಿಂದ ರಾಷ್ಟ್ರೀಯ ಜೀವನದಲ್ಲಿ ಒದಗಿಬಂದಿರುವ ತೊಂದರೆಗಳಿಗೆ ತೆರಿಗೆ ಕಳ್ಳತನ ಮತ್ತಿತರ ದುಷ್ಕೃತ್ಯಗಳ ವಿರುದ್ಧ ಕ್ರಮಗಳು ಪ್ರೋತ್ಸಾಹಕರ ಫಲಿತಾಂಶ ತಂದಿರುವುದೆಂದು ಕಣದುಬ್ಬರದ ವಿಚಾರದಲ್ಲಿ ಸರ್ಕಾರದ ಕ್ರಮ ಸ್ತುತ್ಯ ಆದುದೆಂದು ತಿಳಿಸಿದರು.

★

### ಅನುಮತಿ ನೀಡಿಕೆ

ತನ್ನ ರಾಯಭಾರಿಯಾಗಿದ್ದ ಪ್ರೇಮಿಯಾಗಿದ್ದ ವನನ್ನು ಮದುವೆ ಆದ ಹಾಗೂ ಫ್ರಾನ್ಸಿಗೆ ವಲಸೆ ಹೋಗಲು ಅನುಮತಿಗಾಗಿ ಫ್ರಾನ್ಸಿನ ಓರ್ವ ಯುವತಿ ಮೇರಿ ಆಂಡ್ರಿ ಇತ್ತೀಚೆಗೆ ಫ್ರಾನ್ಸಿನ ವಿದೇಶಾಂಗ ಮಂತ್ರಿಯವರ ಕಚೇರಿ ಮುಂದೆ ಉಪವಾಸವನ್ನು ಮಾಡಿ ಅನುಮತಿ ಪಡೆದಳು.

○

### 3 ನೇ ಶಾ. ರೇಸ್ ಇಲ್ಲ

ಮೈಸೂರು — ಅಕ್ಟೋಬರ್ 3 ನೇ ತಾರೀಖು ಭಾನುವಾರ ವಿಜಯದಶಮಿ ನೆರವಣಿಗೆ ನಡೆಯುತ್ತದೆ. ಆ ದಿನ ಇಲ್ಲಿ ಕುದುರೆ ರೇಸ್ ಇಲ್ಲ. ಆ ದಿನಕ್ಕೆ ಏರ್ಪಡಿಸಿದ್ದ ಕುದುರೆ ರೇಸ್‌ನ್ನು ಅಕ್ಟೋಬರ್ 2 ನೇ ಶನಿವಾರ ನಡೆಸಲಾಗುವುದು ಗವರ್ನರ್ ಗೋಲ್ಡ್ ಕಪ್ ರೇಸ್ ಅಕ್ಟೋಬರು 1 ಶುಕ್ರವಾರ ನಡೆಯುವುದು.

★ ಕೀರ್ತಿ ವೀರಕೃತ್ಯಗಳ ಸುಗಂಧ
— ಸಾಕ್ರೆಟೀಸ್

### ಕಾಲಾವಕಾಶ ಹೆಚ್ಚಿಸಬಾರದು

ನವದೆಹಲಿ — ಪಟ್ಟಣ ಭೂಮಿ ಪರಿಮಿತಿ ರೀತ್ಯ ಹೆಚ್ಚು ಖಾಲಿ ಜಾಗ ಹೊಂದಿರುವವರು ಸ್ಟೇಟ್‌ಮೆಂಟ್ ಹಾಜರುಪಡಿಸುವ ಕಾಲಾವಕಾಶವನ್ನು ಮುಂದುವರಿಸಬಾರದೆಂದು ಕೇಂದ್ರ ಸರ್ಕಾರ ಘೋಷಿಸಿದೆ.

●

### ರಾಜ್ಯಸಭೆ

ನವದೆಹಲಿ — ನವೆಂಬರು 3 ನೆಯ ತಾರೀಖು ರಾಜ್ಯಸಭೆ ಸೇರುವಂತೆ ಅಧ್ಯಕ್ಷರು ಸೂಚಿಸಿದ್ದಾರೆ. ನವೆಂಬರ್ 12 ರ ವರೆಗೆ ನಡೆಯಬಹುದು

★

### ನಿರವಿ ಪದಾರ್ಥಗಳ ವಶ

ದಾವಣಗೆರೆ — ಇಲ್ಲಿ ಒಂದು ಮನೆ ಮೇಲೆ 20 ಅಂಶಗಳ ಕಾರ್ಯಕ್ರಮದ ರೀತ್ಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಬಸವರಾಜುರವರು ನಡೆಸಿದ ದಾಳಿಯಲ್ಲಿ 20 ಜನರು ನಿರವಿ ಇಟ್ಟಿದ್ದ 20 ಸಹಸ್ರ ರೂ ಬೆಲೆ ಬಾಳುವ ಪದಾರ್ಥಗಳನ್ನು ವಶಪಡಿಸಿಕೊಂಡರು ಅವುಗಳನ್ನು ಮುಖ್ಯ ವಂತ್ರಿ ಶ್ರೀ ಡಿ. ದೇವರಾಜ ಅರಸರವರು ಈ ದಿನ ಕೊಡುವ ಕಾರ್ಯಕ್ರಮ ಇದೆ.

○

### ಸ್ವಯಂ ಸೇವಕರ ನೇಮಕ

ಬೆಂಗಳೂರು — ಇಲ್ಲಿಯ ಕೆಲವು ಸರಕಾರಿ ಆಸ್ಪತ್ರೆಗಳಲ್ಲಿ ಕೆಲವು ಮಹಿಳಾ ಸ್ವಯಂಸೇವಕರನ್ನು ನೇಮಿಸಲು ಆರೋಗ್ಯ ಮತ್ತು ಪೌರಾಡಳಿತ ಇಲಾಖೆ ಯೋಜಿಸಿದೆ

○

ಬೆಂಗಳೂರು — ನಗರದ ಓರ್ವನಿಂದ ಕೇಂದ್ರ ಅಬ್ಕಾರಿಯವರು ಮೂರೂವರೆ ಲಕ್ಷ ರೂ ಬೆಲೆಯ ಚಿನ್ನಾಭರಣಗಳನ್ನು ವಶಪಡಿಸಿಕೊಂಡರು

### ಬೆತ್ತಲೆ "ಮಳೆ ನೃತ್ಯ"

ಬ್ರಿಟನ್ನಿನ ಓರ್ವ 35 ವರ್ಷದವನು ಅನಾವೃಷ್ಟಿ ಪೀಡಿತ ಬ್ರಿಟನ್ನಿನಲ್ಲಿ ಮಳೆ ಬರಿಸಲು 5 ಪೌಂಡ್ ಗಳಿಗಾಗಿ ಬೆತ್ತಲೆಯಾಗಿ "ಮಳೆ ನೃತ್ಯ ನಡೆಸಿದನು — ಮಳೆ ಏನೂ ಬರಲಿಲ್ಲ — ಆದರೆ ಇವನಿಗೆ ಬೆತ್ತಲೆ ಪ್ರದರ್ಶನದ ಅಶ್ಲೀಲ ಪ್ರದರ್ಶನಕ್ಕಾಗಿ 10 ಪೌಂಡು ಜುಲ್ಮಾನೆ ವಿಧಿಸಲಾಯಿತು ; ಜೊತೆಗೆ 1 ವರ್ಷ ಶಾಂತತೆ ಕಾಪಾಡಲು ಮುಚ್ಚಳಿಕೆ ಪಡೆಯಲಾಯಿತು !

★

### ಉಪಕುಲಪತಿಯವರಿಗೆ ಸನ್ಮಾನ

ಬೆಂಗಳೂರು — ಕನ್ನಡ ಸಾಹಿತ್ಯ ಪರಿಷತ್ತು ಶುಕ್ರವಾರ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀ ಡಿ ವಿ ಅರಸ್‌ರನ್ನು ಸನ್ಮಾನಿಸಿತು.

★

### ಚಿನ್ನಕ್ಕಾಗಿ ಕೆರೆಯಿಂದ ನೀರು ತೆಗೆದುಹಾಕಲಾಗುತ್ತಿದೆ

ಕೋಸಿಕೋಡು — ಪಯಿಲ್ಕಾವ್‌ನಲ್ಲಿ ಒಂದು ದೊಡ್ಡ ಕೆರೆಗೆ 20 ವರ್ಷಗಳ ಹಿಂದೆ ಕಳ್ಳಸಾಗಾಣಿಕೆಗಾರರು ಚಿನ್ನದ ಬಿಸ್ಕತ್ ರಾಶಿ ಹಾಕಿರುವವರೆಂಬ ವದಂತಿ ಅನುಸರಿಸಿ ಕೆರೆಯ ನೀರನ್ನೆಲ್ಲಾ ಹೊರಕ್ಕೆ ಪಂಪುಮಾಡಲಾಗುತ್ತಿದೆ.

●

### ವರದಕ್ಷಿಣೆ ಪೆಡಂಭೂತ

ರಾಯಪುರ — ವರದಕ್ಷಿಣೆ ಕೊಡುವ ಅಥವಾ ಸ್ವೀಕರಿಸುವ ಸಂಸಾರಗಳನ್ನು ಬಹಿಷ್ಕರಿಸಲು ಇಲ್ಲಿಯ ಕೇಂದ್ರ ಸಿಂಧಿ ಪಂಚಾಯಿತಿಯು ನಿರ್ಧರಿಸಿದೆ.

○

### ಜಾತಿ ಕೋಮು ಸೂಚನೆ

ಉತ್ತರ ಪ್ರದೇಶದ ಯುವಕ ಕಾಂಗ್ರೆಸ್ಸಿನವರು ಜಾತಿ ಕೋಮುಗಳನ್ನು ಸೂಚಿಸುವ ಅಡ್ಡ ಹೆಸರನ್ನು ತ್ಯಜಿಸಲು ನಿರ್ಧರಿಸಿ ಎವರು.

●

### ದಿವ್ಯವಾಣಿ

ಪ್ರತಿತಿಯೊಬ್ಬರೂ ತಮ್ಮ ಮನೆ ಮುಂದೆ ಗುಡಿಸಲಿ ; ಆಗ ಇಡೀ ವಿಶ್ವವೆ ಶುಚಿಯಾಗಿರುತ್ತೆ.
— ಗೋಧೆ

### ಸಿಂಹಾಸನ ಮತ್ತು ದರ್ಬಾರ್ ಹಾಲ ನೋಡಲು ಅವಕಾಶ

ಮೈಸೂರು — ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಅರಮನೆಯ ಇತಿಹಾಸ ಪ್ರಸಿದ್ಧ ಚಿನ್ನದ ಸಿಂಹಾಸನ ಹಾಗೂ ದರ್ಬಾರು ಒಳಾಂಗಣವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಇಂದಿನಿಂದ ಅಕ್ಟೋಬರು 20 ರವರೆಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ ; ಅರಮನೆಯ ಉತ್ತರ ದ್ವಾರಮೂಲಕ ಸಾರ್ವಜನಿಕರಿಗೆ ಅವಕಾಶ ನೀಡಲಾಗಿದ್ದು, ರೂ 1 ಪ್ರವೇಶಧನ ನಿಗದಿ ಮಾಡಲಾಗಿದೆ.

(2)

ಸತ್ಯವಾದಿ

ಕಳ್ಳರಿಂದ ಬಟ್ಟೆ ಅಪಹರಣ

ನ್ಯೂಯಾರ್ಕ್ — ಇನ್‌ವುಡ್‌ನ ಒಂದು ಹೊಸಗಿ ಮನೆ ಸುತ್ತ 15 ಪುರುಷರು ಹಾಗೂ 15 ಮಹಿಳೆಯರು ಕುಳಿತು ಇಸ್ಪೀಟು ಆಡುತ್ತಿದ್ದರು. ಆಗ ಮುಖವಾಡ ಧರಿಸಿದ 3 ಮಂದಿ ಬಂದೂಕಧಾರಿಗಳು ಬಂದು ಇವರೆಲ್ಲರನ್ನು ಬಟ್ಟೆ ತೆಗೆದು ಠಾಕುವಂತೆ ತಿಳಿಸಿದರು. ಅವರು ಬಿಚ್ಚಿಹಾಕಿದ ಬಟ್ಟೆಗಳನ್ನು 3 ದೊಡ್ಡ ಪ್ಲಾಸ್ಟಿಕ್ ಚೀಲಕ್ಕೆ ತುಂಬಿಕೊಂಡು ಅವರ ಗಡಿಯಾರಗಳನ್ನು ಆಭರಣಗಳನ್ನು ಕಸಿದುಕೊಂಡು ಪರಾರಿ ಆದರು. ಅವರು ಓಡಿದನಂತರ ಇಸ್ಪೀಟು ಆಟಗಾರರು ತಮ್ಮ ಸ್ನೇಹಿತರಿಗೆ ಬಟ್ಟೆ ತರಲು ಫೋನ್ ಮಾಡಿದರು.

★

ಕ್ರೀಡೆಗೆ ಹಣ ನಿಗದಿ

ಬೆಂಗಳೂರು — ಕರ್ನಾಟಕ ರಾಜ್ಯ ಕ್ರೀಡಾ ಸಮಿತಿ ರಾಜ್ಯಪಲ್ಲಿ ಕ್ರೀಡೆಗಳನ್ನು ಅಭಿವೃದ್ಧಿ ಮೂಡುವ ಸಲುವಾಗಿ ರಾಜ್ಯ ಮಟ್ಟದ ದಸರಾ ಕ್ರೀಡೆ ನಡೆಸಲು 60 ಸಾವಿರ ರೂ ನಿಗದಿ ಮಾಡಿದೆ.


ಭಾರತದಲ್ಲಿ ಗೋವಧೆ

ಪೂರ್ಣ ನಿಶ್ಶೇಧವಾಗಲಿ

ಗೋರಕ್ಷಣೆ'ಕ್ಕೆ ಸಕಲ ನೆರವು ನೀಡಿ

ಶ್ರೀ ರ

ಗೋರಕ್ಷಣೆ, ವ್ಯಾಪಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇಗಿರುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ವ್ಯಾಪಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಹೊತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

"ಗೋರಕ್ಷಣ" ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

Protect the Cow

Contribute Liberally to

the National Defence Fund

Quality Printing, Neat Binding

Lakshminarasimha Press

[illegible] Mysore

ವುಡ್‌ಲಾಂಡ್ 19 9 76 ರಿಂದ

ಅವೋಘ ಆರಂಭ

— ಬಿಳಿ ಹೆಂಡ್ತಿ

ಕನ್ನಡ

ಕಲರ್

ಮಾರ್ಗರೆಟ್ ಆರತಿ ಅಭಿನಯ

ದಿನ 3 ಪ್ರದರ್ಶನಗಳು

ಅಪೆರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ

ಕನ್ನಡ ಶೆಂಗೆ ವಿನಾಯಿತಿ ಪ್ರತಿ ದಿನ 3 ಪ್ರದರ್ಶನಗಳು

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುತ್ತಾ, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

SHAKTI

SUDHA

A Superb Tonic



Edited Printed and Published by Dharmacharanarata M S. Krishna Rao ( Proprietor ) at the Satyavadi Press, Gunmarg Mysore 4